ಶ್ರೀ ಡಿ. ಬಿ. ಚಂದ್ರೇಗೌಡ.—ಮೂಲಭೂತವಾಗಿ ವಿಧಿಬಿಂದು ಬಗ್ಗೆ ಮಾನ್ಯ ಮಂತ್ರಿಗಳು ಇದೇ ವಿಚಾರ ಹೈಕೋರ್ಟಿನಲ್ಲಿದೆ ಎಂದು ಹೇಳಿದ್ದಾರೆ. ಇಲ್ಲಿ ಒಂದು ಏನೆಂದರೆ, the matter does not become sub-judice if a writ petition is pending before the court. In my opinion, on the same subject, there is a petition admitted ಅದನ್ನು ಮಂತ್ರಿಗಳು ಒಪ್ಪಿಕೊಳ್ಳುತ್ತಾರೆ. ಹಾಗಿದ್ದರೆ ಚರ್ಚೆಗೆ ಒಪ್ಪಿಕೊಳ್ಳಲಿ, ಸಬ್‌ಜುಡೀಸ್ ಆಗಂ ವುದಿಲ್ಲವೆಂದಂ ಹೇಳಲಿ. ರಿಟ್ ಪಿಟೀಷನ್ ಕಾಪಿ ತರಿಸಲಿ.

ಅಧ್ಯಕ್ಷರು.—ಸಬ್‌ಜುಡೀಸ್ ಆಗುತ್ತದೆಯೇ ಇಲ್ಲವೋ, ಅದು ತಮ್ಮ ಅಭಿಪ್ರಾಯ.

ಶ್ರೀ ಎಂ. ವಿ. ವೆಂಕಟಪ್ಪ.—ವಿಷಯ ಹೈಕೋರ್ಟಿನಲ್ಲಿರುವುದು ನಿಜ. ಅದು ನಮಗೂ ಗೊತ್ತಿದೆ ಜಿಲ್ಲಾ ಪರಿಷತ್ತಿನ ಸದಸ್ಯರು ಹೈಕೋರ್ಟಿನಲ್ಲಿ ರಿಟ್ ಹಾಕಿದ್ದಾರೆ. ೨೮-೨-೮೯ರ ಮೀಟಿಂಗ್‌ನಲ್ಲಿ ೩೩ ಜನ ಸದಸ್ಯರು ಈ ರೀತಿ ಇಷ್ಟು ಹಣವನ್ನು ದುರುಪಯೋಗಪಡಿಸಿದ್ದಾರೆಂದು ವಿಷಯವನ್ನು ತಂದ ಬಳಿಕ ೭-೮ ಮೀಟಿಂಗ್‌ಗಳನ್ನು ನಡೆಸಿದ್ದಾರೆ. ಮೀಟಿಂಗ್‌ನಲ್ಲಿ ಏನು ಮಾಡುತ್ತಾರೆಂದರೆ, ೫ ನಿಮಿಷದಲ್ಲಿ ಪುಸ್ತಕ ಗಳನ್ನು ಕಾರ್ಯದರ್ಶಿಯವರು ಹೊರಗಡೆ ಎತ್ತಿಕೊಂಡು ಹೋಗಿ ರುಜು ಮಾಡಿಸಿಕೊಂಡು ಬರುತ್ತಾರೆ ಇದರ ಬಗ್ಗೆ ಯಾವ ಮಟ್ಟಕ್ಕೆ ಹೋಗಿದ್ದಾರೆಂದರೆ...

ಅಧ್ಯಕ್ಷರು.—ಇದರ ಬಗ್ಗೆ ಸಂಸದೀಯ ವ್ಯವಹಾರ ಸಚಿವರು ಏನು ಹೇಳುತ್ತಾರೆ ಹೇಳಲಿ.

ಶ್ರೀ ಡಿ. ಬಿ. ಚಂದ್ರೇಗೌಡ.—ಹೈಕೋರ್ಟಿನಲ್ಲಿರುವುದು ಗೊತ್ತಿದೆ. ಹೈ ಕೋರ್ಟಿನವರು ಎರಡು ವರ್ಷ ತೆಗೆದುಕೊಳ್ಳಬಹುದು.

ಶ್ರೀ ಎಂ. ವೀರಪ್ಪ ಮೊಯಿಲಿ.—ಹಣ ದುರುಪಯೋಗದ ಬಗ್ಗೆ ಏನಾದರೂ ರಿಟ್ ಪಿಟಿಷನ್ ಇದ್ದು ಅದು ಹೈಕೋರ್ಟಿನಲ್ಲಿ ತೀರ್ಮಾನಕ್ಕೆ ಇದ್ದರೆ ಅದು ಸಬ್‌ಜುಡೀಸ್ ಆಗುತ್ತದೆ. ಆದರೆ ಇದು ಆ ವಿಷಯ ಅಲ್ಲ ಅಲ್ಲಿರತಕ್ಕ ವಿವಾದದ ವಸ್ತು ಏನೆಂದರೆ ಅದು ಮೀಟಿಂಗ್ ರೆಸಲ್ಯೂಷನ್, ಮತ್ತು ಮೀಟಿಂಗ್ ನಡೆಯಬೇತ್ತಿಲ್ಲವೆಂದು. ಇದು ವಿವಾದದ ವಸ್ತುವಾಗಿದೆಯೇ ಹೊರತು ಬೇರೆ ಅಲ್ಲ. ತಮಗೆ ಗೊತ್ತಿರುವ ಹಾಗೆ ಹಣ ದುರುಪಯೋಗವಾಗಿದೆಯೇ ಅಥವಾ ಇಲ್ಲವೇ ಎಂದು ಬಹುಶಃ ಅಲ್ಲಿ ರಿಟ್ ಫೈಲು ಮಾಡತಕ್ಕ ಪ್ರಶ್ನೆ ಇರುವುದಿಲ್ಲ. ಅದನ್ನು ನಿರ್ಣಯ ಮಾಡತಕ್ಕದು ಪ್ರತ್ಯೇಕವಾಗಿರುತ್ತದೆ. ಆದ್ದರಿಂದ ಅದು ಅದಕ್ಕೆ ಸಂಬಂಧಪಟ್ಟದ್ದು ಅಲ್ಲವೇ ಅಲ್ಲ.

ಶ್ರೀ ಸಿ. ಬೈರೇಗೌಡ.—ವಿಚಾರ ನನಗೆ ಗೊತ್ತಿರುವುದರಿಂದ ಅದನ್ನು ಹೇಳಿದರೆ ತಮಗೆ ಸಹಾಯ ವಾಗುತ್ತದೆ. ಹೈಕೋರ್ಟಿನಲ್ಲಿ ರಿಟ್ ಪಿಟಿಷನ್ ಇರತಕ್ಕದ್ದು ಬೇರೆ ವಿಚಾರದಲ್ಲಿ. ಅದು ಸಭೆ ನಡೆದಂತಹ ದಿವಸ ಅಲ್ಲಿ ನಡೆದಂತಹ ವ್ಯವಹಾರಗಳ ಬಗ್ಗೆ ಇರತಕ್ಕದ್ದು, ಅಧ್ಯಕ್ಷರಿಗೆ ಬಹುಮತ ಇಲ್ಲದೆ ಇದ್ದರೂ ಬಹುಮಂತದಿಂದ ಪಾಸ್ ಆಯಿತು ಎಂದು ಅಧ್ಯಕ್ಷರು ನಮೂದಿಸಿಕೊಂಡಿದ್ದಾರೆ. ಆ ವಿಚಾರ ಹೈಕೋರ್ಟಿನಲ್ಲಿರುವುದು. ಇಲ್ಲಿ ಬಂದಿರುವುದು ಹಣದ ದುರುಪಯೋಗದ ಬಗ್ಗೆ. ಆದ್ದ ರಿಂದ ಎರಡೂ ವಿಚಾರಗಳು ಬೇರೆ ಬೇರೆ ಆಗಿರುವುದರಿಂದ ಹಣದ ದುರುಪಯೋಗದ ಬಗ್ಗೆ ಇಲ್ಲಿ ಗಮನ ಸೆಳೆಯುವ ಸೂಚನೆಯನ್ನು ತರಲಾಗಿದೆ. ಹೈಕೋರ್ಟಿನಲ್ಲಿರುವುದು ಮೀಟಿಂಗ್‌ನಲ್ಲಿ ಪ್ರೊಸೀಜರ್ ಅಡಾಪ್ಟ್ ಮಾಡಿರುವ ಬಗ್ಗೆ. ಆದ್ದರಿಂದ ಈಗ ಸಭೆಯ ಮುಂದಿರುವ ಗಮನ ಸೆಳೆಯುವ ಸೂಚನೆ ಯನ್ನು ತೆಗೆದುಕೊಳ್ಳಬಹುದೆಂದು ನನ್ನ ಅಭಿಪ್ರಾಯ....

ಅಧ್ಯಕ್ಷರು.—ಸರ್ಕಾರದ ಮುಂದಿರತಕ್ಕ ವಿಷಯದ ಬಗ್ಗೆ ರಿಟ್ ಪಿಟಿಷನ್ ಇದೆಯೇ? ಇದ್ದರೆ ಅದನ್ನು ನನಗೆ ಕಳುಹಿಸಿಕೊಟ್ಟರೆ ನಾನು ನೋಡಿ ಸಬ್‌ಜುಡೀಸ್ ಆಗುತ್ತದೋ ಇಲ್ಲವೋ ಎಂಬುದರ ಬಗ್ಗೆ ತೀರ್ಮಾನ ಕೊಡುತ್ತೇನೆ. ಈಗ ಇನೇ ಗಮನ ಸೆಳೆಯುವ ಸೂಚನೆ ಶ್ರೀ ಶಿವಾನಂದ ಕೌಜಲಗಿಯವರದ್ದು.

೩. ಬೆಳಗಾಂ ಜಿಲ್ಲೆಯ ಬೈಲಹೊಂಗಲ ಮತ್ತು ಸವದತ್ತಿ ಎ.ಪಿ.ಎಂ.ಸಿ. ಮಾರ್ಕೆಟ್ ಯಾರ್ಡ್‌ನಲ್ಲಿ ಕೋಟ್ಯಾಂತರ ರೂಪಾಯಿಗಳ ಹತ್ತಿ ಕೆಡುತ್ತಿರುವುದರಿಂದ ರೈತರಿಂದ ಹತ್ತಿಯನ್ನು ಯೋಗ್ಯ ಬೆಲೆಗೆ ಸರ್ಕಾರದವರು ಕೊಂಡುಕೊಳ್ಳುವ ಬಗ್ಗೆ

ಶ್ರೀ ಶಿವಾನಂದ ಎಚ್. ಕೌಲಜಗಿ. ** ಮಾನ್ಯ ಅಧ್ಯಕ್ಷರೆ, ಬೈಲಹೊಂಗಲ ಮತ್ತು ಸವದತ್ತಿ ಮಾರುಕಟೆ ಯಲ್ಲಿ ಹತ್ತಿ ಕೊಳ್ಳದಿರುವುದರಿಂದ ಉಂಟಾಗಿರುವ ಸಮಸ್ಯೆ ಬಗ್ಗೆ ಮಾನ್ಯ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಕೆ.ಎಚ್. ರಂಗನಾಥ್ (ಕೃಷಿ ಮತ್ತು ತೋಟಗಾರಿಕೆ ಸಚಿವರು).—೧೯೬೯-೭೦ನೇ ಸಾಲಿನಲ್ಲಿ ರಾಜ್ಯದಲ್ಲಿ ಸುಮಾರು ೧೧.೪೩ ಲಕ್ಷ ಬೇಲ್‌ಗಳಷ್ಟು ಹತ್ತಿ ಉತ್ಪಾದನೆ ಬರಬಹುದೆಂದು, ಅಂದಾಜು ಮಾಡಲಾಗಿದೆ. ಈಗ ಬೆಳಗಾವಿ ಜಿಲ್ಲೆಯ ಬೈಲಹೊಂಗಲ ಎ. ಪಿ. ಎಂ. ಸಿ. ಗೆ ೧,೨೦,೦೦೦ ಕ್ವಿಂಟಾಲ್ ಹತ್ತಿ ಮತ್ತು ಸವದತ್ತಿ ಎ. ಪಿ. ಎಂ. ಸಿ.ಗೆ ೧೧,೫೫೨ ಕ್ವಿಂಟಾಲ್ ಹತ್ತಿ ಮಾರಾಟಕ್ಕೆ ಬಂದಿದೆಯೆಂದು ವರದಿಯಾಗಿರುತ್ತದೆ. ಭಾರತೀಯ ಹತ್ತಿ ನಿಗಮದವರು ದಿನಾಂಕ. ೧೯-೧೨-೧೯೬೯ರಿಂದ ದಿನಾಂಕ. ೧೦-೧೨-೧೯೬೯ರವರೆಗೆ ಸವದತ್ತಿ ಎ.ಪಿ.ಎಂ.ಸಿ. ಯಲ್ಲಿ ೧,೦೧೦ ಕ್ವಿಂಟಾಲ್ ಹತ್ತಿಯನ್ನು ಖರೀದಿಸಿರುತ್ತಾರೆ. ಮೇಲಿನ ಮಾರುಕಟ್ಟೆಗಳಲ್ಲಿ ಒಂದು ಕ್ವಿಂಟಾಲ್ ಹತ್ತಿಗೆ ಕನಿಷ್ಠ ಬೆಲೆ ೧,೦೫೦ ರೂ ಗಳು ಮತ್ತು ಗರಿಷ್ಠ ಬೆಲೆ ೧,೬೨೯ ರೂ. ಗಳಾಗಿರುತ್ತದೆ. ಈ ಬೆಲೆಯು ಬೆಂಬಲ ಬೆಲೆಗಿಂತ ಹೆಚ್ಚಿನದಾಗಿರುತ್ತದೆ.

ಭಾರತ ಹತ್ತಿ ನಿಗಮವು, ಭಾರತ ಸರ್ಕಾರವು ನಿಗಧಿಪಡಿಸುವ ಬೆಂಬಲ ಬೆಲೆಗಿಂತ ಹತ್ತಿ ದರವು ಕಡಿಮೆಯಾದ ಪಕ್ಷದಲ್ಲಿ ಮಾತ್ರ ಮಾರುಕಟ್ಟೆಯನ್ನು ಪ್ರವೇಶಿಸಿ ಬೆಂಬಲ ಬೆಲೆಯಲ್ಲಿ ಹತ್ತಿಯನ್ನು ರೈತರಿಂದ ಖರೀದಿಸುವುದು. ಕೇಂದ್ರ ಸರ್ಕಾರವು ೧೯೬೯-೭೦ ರ ಸಾಲಿಗೆ ಪ್ರತಿ ಕ್ವಿಂಟಾಲ್ ಡಿ.ಸಿ.ಹೆಚ್-೩೨ ಹತ್ತಿಗೆ ರೂ. ೭೫೫ ನಿಗದಿಪಡಿಸಿರುತ್ತದೆ. ಇದರಂತೆ ನಿಗದಿಪಡಿಸಲಾಗಿರುವ ಕನಿಷ್ಠ ಗುಣಮಟ್ಟವುಳ್ಳ ಡಿ. ಸಿ, ಹೆಚ್-೩೨ ಹತ್ತಿ ದರವು ಮಾರುಕಟ್ಟೆಯಲ್ಲಿ ಪ್ರತಿ ಕ್ವಿಂಟಾಲ್‌ಗೆ ರೂ. ೭೫೫ ಕ್ಕಿಂತ ಕಡಿಮೆಯಾದ ಪಕ್ಷದಲ್ಲಿ ಮಾರುಕಟ್ಟೆಯನ್ನು ಪ್ರವೇಶಿಸಿ ಹತ್ತಿಯನ್ನು ಖರೀದಿಸುವುದರಿಂದ ರೈತರಿಗೆ ಭಾರತ ಸರ್ಕಾರ ನಿಗಧಿಪಡಿಸಿರುವ ಬೆಂಬಲ ಬೆಲೆಯು ಸಿಗುವುದರಲ್ಲಿ ಯಾವ ತೊಂದರೆಯು ಇರುವುದಿಲ್ಲ.

ಮೇಲೆ ತಿಳಿಸಿದಂತೆ ಭಾರತ ಹತ್ತಿ ನಿಗಮವು ೧೯೬೯-೭೦ನೇ ಸಾಲಿನಲ್ಲಿ ಹತ್ತಿಯನ್ನು ಖರೀದಿಸಲು ಈಗಾಗಲೇ ಪ್ರಾರಂಭಿಸಿದ್ದು ಕಾಲಕ್ರಮೇಣ ತನ್ನ ಚಟುವಟಿಕೆಯನ್ನು ಹೆಚ್ಚಿನ ಪ್ರಮಾಣದಲ್ಲಿ ಕೈಗೊಳ್ಳುವುದು.

ರಾಜ್ಯ ಸರ್ಕಾರವು ರೈತರಿಂದ ಹತ್ತಿಯನ್ನು ನೇರವಾಗಿ ಖರೀದಿಸಲು ಯಾವ ಯೋಜನೆಯೂ ಇರುವುದಿಲ್ಲ.

ಶ್ರೀ ಶಿವಾನಂದ ಎಚ್. ಕೌಜಲಗಿ.—ಮಾನ್ಯ ಅಧ್ಯಕ್ಷರೆ, ಈಗಾಗಲೇ ಮಾನ್ಯ ಮಂತ್ರಿಗಳು ಬೈಲ ಹೊಂಗಲ ಎ. ಪಿ. ಎಂ. ಸಿ. ಗೆ ೧.೨೦,೦೦೦ ಕ್ವಿಂಟಾಲ್ ಹತ್ತಿ ಬಂದಿದೆ ಹಾಗೂ ಸವದತ್ತಿಯಲ್ಲಿ ೧೦೧೦ ಕ್ವಿಂಟಾಲ್ ಹತ್ತಿಯನ್ನು ಈಗಾಗಲೇ ಖರೀದಿ ಮಾಡಿದ್ದಾರೆ ಎಂದು ಹೇಳಿದರು. ಬೈಲಹೊಂಗಲದಲ್ಲಿ ನಾಲ್ಕೈದು ಕೋಟಿ ರೂಪಾಯಿಗಳ ಮಾಲಿದ್ದರೂ ಇವತ್ತಿನವರೆಗೆ ಏತಕ್ಕೆ ಖರೀದಿ ಮಾಡಿಲ್ಲ. ಖರೀದಿದಾರರು ಸಹ ೭೦೦-೮೦೦ ಕ್ಕಿಂತ ಹೆಚ್ಚು ದರ ಹಾಕಿಲ್ಲ, ಕರ್ನಾಟಕ ಫೆಡರೇಷನ್ ಕಾರ್ಪೊರೇಷನ್‌ನವರು ಏತಕ್ಕೆ ಹತ್ತಿಯನ್ನು ಖರೀದಿ ಮಾಡಿಲ್ಲ? ನಾಲ್ಕೈದು ಕೋಟಿ ರೂಪಾಯಿಗಳ ಮಾಲಿದ್ದು ಸರ್ಕಾರಕ್ಕೆ ಮೇಲಿಂದ ಮೇಲೆ ರೈತರು ತಿಳಿಸಿದ್ದರೂ ಯಾವುದೇ ಕ್ರಮವನ್ನು ಏತಕ್ಕೆ ಕೈಗೊಂಡಿಲ್ಲ ಎಂದು ಮಾನ್ಯ ಮಂತ್ರಿಗಳನ್ನು ತಮ್ಮ ಮೂಲಕ ಕೇಳುತ್ತೇನೆ.

ಶ್ರೀ ಕೆ. ಎಚ್. ರಂಗನಾಥ್.—ಹತ್ತಿ ಮಾರುಕಟ್ಟೆಗೆ ಹೆಚ್ಚು ಬರುತ್ತಿದೆ. ಆದರೆ ಬೆಲೆ ಹೋದ ವರ್ಷಕ್ಕಿಂತ ಈ ವರ್ಷ ಕಡಿಮೆಯಾಗಿದೆ ಎಂದು ಸುದ್ದಿ ಬಂದಿದೆ. ಹತ್ತಿ ಖರೀದಿ ಹೇಗಾಗುತ್ತದೆ ಎಂಬುದೆನ್ನು ನೋಡಬೇಕು. ಖರೀದಿದಾರರು ಬಹಳ ಕಡಿಮೆ ಜನ ಇದ್ದಾರೆ. ಅವರು ಸ್ವಲ್ಪ ದಿವಸ ತಡ ಮಾಡಿದರೆ, ಹತ್ತಿ ಜಾಸ್ತಿ ಬರತಕ್ಕ ಸಮಯದಲ್ಲಿ ರೇಟ್ ಕಡಿಮೆಯಾಗಬಹುದು ಎಂದು ಸಂಚು ಮಾಡುತ್ತಿರುತ್ತಾರೆ. ಅವರು ಮಾರ್ಕೆಟ್‌ನಲ್ಲಿ ಹೆಚ್ಚು ಕಡಿಮೆ ಆಗುವುದನ್ನು ನೋಡುತ್ತಿರುತ್ತಾರೆ.

ಆದರೆ ನನಗೆ ವರ್ತಮಾನ ಬಂದಿರತಕ್ಕದ್ದು ಮಾರ್ಕೆಟ್‌ನಲ್ಲಿ ರೈತರು ಕೂಡಾ ಇವತ್ತು ಹೆಚ್ಚು ಬೆಲೆ ಬಂದಿಲ್ಲವೆಂದು ಮಾರುವುದಕ್ಕೆ ತಯಾರು ಇಲ್ಲ ಎಂದು ಹೇಳಿ ಪ್ರತಿಭಟನೆ ಮಾಡುತ್ತಾ ಇರುವುದರಿಂದ ಎಪಿಎಂಸಿ ಮಾರ್ಕೆಟ್‌ನವರೂ ಕೂಡಾ ಖರೀದಿ ವಹೀವಾಟು ಜನವರಿ ೧ನೇ ತಾರೀಖಿನವರೆಗೆ ನಿಲ್ಲಿಸಿದ್ದಾರೆಂದು ನನಗೆ ವರ್ತಮಾನ ಬಂದಿದೆ. ಇದು ಮಾನ್ಯ ಸದಸ್ಯರಿಗೂ ತಿಳಿದೇ ಇರುಬಹುದು.

ಶ್ರೀ ಸಿ. ಬೈರೇಗೌಡ.—ಎಲ್ಲಾ ರೈತರೂ ಮಾರುವುದಕ್ಕೆ ತಯಾರು ಇಲ್ಲ ಎಂದು ಹೇಳುವುದು ಸರಿಯಲ್ಲ. ಒಬ್ಬೊರಿಗೂ ತನ್ನದೇ ಆದ ತಾಪತ್ರಯ, ಸಾಲ ಸೋಲ ಇರುತ್ತದೆ. ಒಬ್ಬರಿಲ್ಲದಿದ್ದರೆ ಮತ್ತೊಬ್ಬರು ತಯಾರು ಇರುತ್ತಾರೆ. ಆದ್ದರಿಂದ ಅವರ ರಕ್ಷಣೆಗೆ ನೀವು ಬರಬೇಕಾಗುತ್ತದೆ.

ಶ್ರೀ ಕೆ. ಹೆಚ್. ರಂಗನಾಥ್.—ಈಗ ಖರೀದಿ ಮಾಡಲು ಮಾರ್ಕೆಟ್‌ಗೆ ಖರೀದಿದಾರರು ಬರದೆ ಇರುವುದರಿಂದ, ಸರಿಯಾದ ಬೆಲೆ ಇಲ್ಲವೇ ಇರುವುದರಿಂದ ಮಾರಾಟ ಮಾಡುವುದಕ್ಕೆ ರೈತರೂ ಉತ್ಸುಕರಾಗಿಲ್ಲ.

ಶ್ರೀ ಎಸ್ ಹೆಚ್. ಕೌಜಲಗಿ.—ಇವತ್ತು ಅಲ್ಲಿ ಕೋಟಿಗಟ್ಟಲೆ ವ್ಯವಹಾರ ಆಗುತ್ತಿದೆ. ಇದು ಖರೀದಿಯಾಗಿಲ್ಲವೆಂದು ಟೆಲಿಗ್ರಾಂ ಮಾಡಿದ್ದಾರೆ. ಅವರು ಸತ್ಯಾಗ್ರಹ ಮಾಡುತ್ತಿದ್ದಾರೆ. ಈ ಬಗ್ಗೆ ಸಿಸಿಐನವರಿಗೂ ಫೆಡರೇಷನ್‌ನವರಿಗೂ ತಿಳಿಸಿದ್ದೇನೆ. ಜನ ಎ. ಸಿ. ಕಚೇರಿ ಮುಂದೆ ಸಂಪು ಮಾಡಿದ್ದಾರೆ ರೈತಸಂಘದ ಅಧ್ಯಕ್ಷರೂ ಅಲ್ಲಿಗೆ ಹೋಗಿ ಖರೀದಿ ಮಾಡಬೇಕು ಎಂದು ಹೇಳಿಬಂದಿದ್ದಾರೆ. ಅಲ್ಲಿ ವ್ಯಾಪಾರಸ್ಥರೂ ರೇಟ್ ಕಡಿಮೆಯಾಗಲಿ ಎಂದು ಕೊಳ್ಳಲು ಮುಂದೆ ಬಾರದೆ ಕಾಯುತ್ತಿದ್ದಾರೆಂಬುದನ್ನೂ ಹೇಳಿದಿರಿ. ಹೀಗಾದರೆ ಫೆಡರೇಷನ್ ಕೆಲಸ ಏನು? ಇದು ರೈತರ ಶೋಷಣೆ ಮಾಡಲು ಇದೆಯೇ ? ಇವೊತ್ತಿನವರೆಗೆ ಆ ಹತ್ತಿಯನ್ನು ಏಕೆ ಕೊಂಡಿಲ್ಲ? ಆ ಅಧಿಕಾರಿಗಳ ಮೇಲೆ ಏನು ಆಕ್ಷನ್ ತೆಗೆದು ಕೊಂಡಿದ್ದೀರಿ? ನಿನ್ನೆ ತಾರೀಖಿನವರೆಗೆ ಅಲ್ಲಿನ ವ್ಯಾಪಾರಕ್ಕೆ ನಿಲುಗಡೆ ಆಗದೆ ಎನ್ನುತ್ತಿರಿ. ಈ ರೀತಿ ಕ್ರಮಕ್ಕೆ ಏನು ಕಾರಣ ಎಂದು ಅಧಿಕಾರಿಗಳನ್ನು ಕಳುಹಿಸಿ ವಿಚಾರಣೆ ಮಾಡಿಸಿದ್ದೀರಾ ? ಅಲ್ಲಿ ಕೋಟಿಗಟ್ಟಲೆ ಹತ್ತಿ ವ್ಯಾಪಾರ ಆಗದೇ ಇರುವಾಗ ಆಫೀಸರ್ಸ್ ಕೂಡ ವಿಸಿಟ್ ಮಾಡುವುದಕ್ಕೆ ತಯಾರು ಇಲ್ಲ.

ಶ್ರೀ ಎಂ. ರಾಜಶೇಖರ ಮೂರ್ತಿ.—ಈ ರಾಜ್ಯದಲ್ಲಿ ೩೫ ಟೆಕ್ಸ್‌ಟೈಲ್ ಫ್ಯಾಕ್ಟರಿಗಳು ಇದ್ದು ಇವುಗಳಲ್ಲಿ ೧೫ ಮುಚ್ಚಿವೆ. ಆದ್ದರಿಂದ ಹತ್ತಿಗೆ ಬೇಡಿಕೆ ಬಹಳ ಮಟ್ಟಿಗೆ ಕಡಿಮೆ ಆಗಿದೆ. ಇತ್ತೀಚೆಗೆ ಕಾಟನ್ ಕಾರ್ಪೊರೇಷನ್ ಆಫ್ ಇಂಡಿಯಾದವರು ಹೊರಗಡೆ ರಫ್ತು ಮಾಡಬೇಕೆಂದು ಹೇಳಿ ಸ್ವಲ್ಪ ರಿಯಾಯಿತಿಯನ್ನು ಟ್ಯಾಕ್ಸ್‌ನಲ್ಲಿ ಕೇಳಿದರು. ಆ ರಿಯಾಯಿತಿಯನ್ನು ಈಗ ಕೊಟ್ಟಿದ್ದೇವೆ. ಮತ್ತು ಅವರು ಮಾರ್ಕೆಟ್‌ಗೆ ಬಂದು ಕಾಟನ್ ಖರೀದಿ ಮಾಡಿ ಹೊರಗಡೆ ರಫ್ತು ಮಾಡುತ್ತಾರೆ. ಆಗ ಪರಿಸ್ಥಿತಿ ಸ್ವಲ್ಪ ಮಟ್ಟಿಗೆ ಉತ್ತಮ ಆಗಬಹುದು; ಆದರೆ ಬಹಳ ಉತ್ತಮ ಆಗಬೇಕಾದರೆ ಏನಾ ಬಾಗಿಲು ಮುಚ್ಚಿರುವ ಫ್ಯಾಕ್ಟರಿಗಳು ಇವೆ ಅವನ್ನು ತೆಗೆದರೆ ಮಾತ್ರ ಪರಿಸ್ಥಿತಿ ಉತ್ತಮ ಆಗುತ್ತದೆ. ಬೆಳೆದವರಿಗೂ ಒಳ್ಳೆಯ ಬೆಲೆ ಸಿಗುತ್ತದೆ.

(ಗೊಂದಲ)

ಅಧ್ಯಕ್ಷರು.—ಸಿಸಿಐಗೆ ರಿಯಾಯಿತಿ ಕೊಡಲಾಗಿದೆ ಎಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ, ಬಾಕಿ ಏನೇ ವಿಚಾರ ಇದ್ದರೂ...

ಶ್ರೀ ಎಸ್. ಹೆಚ್. ಕೌಜಲಗಿ.—ಅವರು ಬೈಲಹೊಂಗದಲ್ಲಿ ಹತ್ತಿ ಖರೀದಿ ಮಾಡದೇ ಇರಲು ಕಾರಣ ಏನು? ಬೇರೆ ಕಡೆ ಮಾಡಿ ಇಲ್ಲಿ ಮಾಡದಿರಲು ಕಾರಣವನ್ನು ತಿಳಿಸಬೇಕು. ರೈತರು ಆ ರೇಟಿಗೆ ಕೊಡಲಿಕ್ಕೆ ತಯಾರಾಗಿದ್ದಾರೆ. ಸರ್ಕಾರ ರೈತರ ಸಲುವಾಗಿ ಮಾರ್ಕೆಟ್ ವ್ಯವಸ್ಥೆ ಮಾಡುತ್ತಿಲ್ಲ. ಸರ್ಕಾರ ಯಾವುದೇ ಕ್ರಮವನ್ನು ತೆಗೆದುಕೊಳ್ಳುತ್ತಿಲ್ಲ. ಇದು ಮಹತ್ವವಾದ ವಿಚಾರ.

ಅಧ್ಯಕ್ಷರು.—ಇದು ಮಹತ್ವವಾದ ವಿಚಾರವೆಂದು ಅಕಾಶ ಮಾಡಿಕೊಟ್ಟಿದ್ದೇನೆ. ಗವಂನ ಸೆಳೆಯುವ ಸೂಚನೆಯ ಮೂಲಕ ಸಭೆಯಲ್ಲಿ ಚರ್ಚೆ ಮಾಡಲಿಕ್ಕೆ ಅವಕಾಶ ಕೊಟ್ಟು ಅದಕ್ಕೆ ಮಂತ್ರಿಗಳು ಈಗ ಉತ್ತರ ಕೊಟ್ಟಿದ್ದಾರೆ. ಇರತಕ್ಕ ಪರಿಸ್ಥಿತಿಯ ಬಗ್ಗೆ ಬೆಳಕನ್ನು ಚೆಲ್ಲಿದ್ದಾರೆ. ಪರಿಸ್ಥಿತಿ ಉತ್ತಮವಾಗುವುದಕ್ಕೆ ಇನ್ನು ಸ್ವಲ್ಪ ಕಾಲಾವಕಾಶಬೇಕೆಂದು ಕೇಳಿದ್ದಾರೆ. ಇದರ ಬಗ್ಗೆ ಇನ್ನು ಹೆಚ್ಚು ಚರ್ಚೆ ಮಾಡಬೇಕಾದರೆ ಬೇರೆ ಅವಕಾಶಗಳು ಇವೆ. ಅದಕ್ಕೆ ತಾವು ಬೇರೆ ನೋಟೀಸ್ ಕೊಡಬೇಕಾಗುತ್ತದೆ.

ಶ್ರೀ ಎಸ್. ಹೆಚ್. ಕೌಜಲಗಿ.—ಆವರೇಜ್ ರೇಟ್ ಬರಲಿ ಸದ್ಯದತ್ತಿಯೊಳಗೆ ೧ ಸಾವಿರ ರೂಪಾಯಿಗಳಿಗೆ ಕೊಡುತ್ತಾರೆ. ಇವತ್ತು ರೈತರ ಪರಿಸ್ಥಿತಿ ಏನು ಎನ್ನುವುದನ್ನು ವಿಚಾರ ಮಾಡಬೇಕಾಗುತ್ತದೆ.

ನಿಯಮ 334ರ ಮೇರೆಗೆ

1) ಕಾಳಿ ಜಲವಿದ್ಯುತ್ ಯೋಜನೆಯ ಸೂಪ ಡ್ಯಾಮ್‌ನಿಂದ ಜಮೀನು ಹಾಗೂ ಮನೆಗಳು ಮುಳುಗಡೆಯಾದ ಕುಟುಂಬಗಳಿಗೆ ಪರಿಹಾರ ಒದಗಿಸುವ ಬಗ್ಗೆ.

ಶ್ರೀ ಪ್ರಭಾಕರ ಎಸ್. ರಾಣೆ.—ಕಾಳಿ ಜಲವಿದ್ಯುತ್ ಯೋಜನೆಯ ಸೂಪ ಡ್ಯಾಮ್‌ನಿಂದ ಪ್ರಥವು ಎರಡನೆಯ ಮತ್ತು ಮೂರನೇ ಹಂತದ ಮುಳುಗಡೆಯಾದ ನೂರಾರು ಕುಟುಂಬಗಳು ಜಮೀನು ಕಳೆದುಕೊಂಡು ನಿರಾಶ್ರಿತರಾಗಿ ಈವರೆಗೆ ಪರಿಹಾರದ ಹಣ, ಹೆಚ್ಚುವರಿ ಹಣ, ಪುನರ್ವಸತಿ ಅನುದಾನ ದೊರಕದೆ ಜನರು ತ್ರಿಶಂಕು ಸ್ಥಿತಿಯಲ್ಲಿದ್ದಾರೆ.